# ಪ್ರಹಸನ ಪ್ರಸಂಗ

**ಅಹಿಂಸೆಯೇ ಪರಮಧರ್ಮ ಎಂದು ಬಾಯಲ್ಲಿ ಮಾತ್ರ ಹೇಳುವ ಧಾರ್ಮಿಕ ಆಷಾಢಭೂತಿಗಳು ಅಹಿಂಸಾ ವ್ರತವನ್ನು ಹೇಗೆ ಆಚರಿಸುತ್ತಾರೆ ಎಂಬುದನ್ನು ವಿವೇಕಾನಂದರು ಒಂದು ಹಾಸ್ಯಪ್ರಸಂಗದ ಮೂಲಕ ವಿವರಿಸುತ್ತಾರೆ.**

ಒಂದು ದಿನ ಅಹಿಂಸಾ ಭಕ್ತನೊಬ್ಬನ ಮನೆಗೆ ಒಬ್ಬ ಕಳ್ಳ ನುಗ್ಗಿದ. ಮನೆ ಹುಡುಗರು ಇವನನ್ನು ಹಿಡಿದು ಚೆನ್ನಾಗಿ ಹೊಡೆಯುತ್ತಿದ್ದರು. ಮನೆಯ ಯಜಮಾನ ಗದ್ದಲ ಕೇಳಿ ಮಹಡಿಯ ಮೇಲಿಂದ ಸಮಾಚಾರವನ್ನು ತಿಳಿದುಕೊಂಡನು. "ಹುಡುಗರೆ, ಅವನನ್ನು ಹೊಡೆಯಬೇಡಿ. ಅಹಿಂಸೆಯೇ ಪರಮ ಧರ್ಮ" ಎಂದನು. ಈ ಕಿರಿಯ ಅಹಿಂಸಾ ಭಕ್ತರ ತಂಡ ಹೊಡೆಯುವುದನ್ನು ನಿಲ್ಲಿಸಿ ಈಗ ಏನು ಮಾಡಬೇಕೆಂದು ಕೇಳಿದರು. ಮನೆಯ ಯಜಮಾನ "ಅವನನ್ನು ಒಂದು ಚೀಲದಲ್ಲಿ ಕಟ್ಟಿ ನೀರಿಗೆ ಹಾಕಿ" ಎಂದನು. ಯಜಮಾನನ ದಯಾಪೂರಿತ ಮನೋಭಾವವನ್ನು ಕಂಡು "ಓ ಸ್ವಾಮಿ, ನಿಮ್ಮ ದಯೆ ಎಷ್ಟು ಅಪಾರವಾದುದು!" ಎಂದು ಕಳ್ಳ ಕೈಮುಗಿದು ಹೇಳಿದನು!

***

**ಮೃತನ ಅವಶೇಷವನ್ನು ಗಂಗೆಗೆ ಹಾಕಿದರೆ ಅವನಿಗೆ ಸದ್ಗತಿ ದೊರೆಯುವುದೆಂಬ ನಂಬಿಕೆ. ಗಂಗಾನದಿಯಿಂದ ದೂರವಿದ್ದು ಅಲ್ಲಿಗೆ ಹೋಗಲಾಗದವರು ಅವಶೇಷವನ್ನು ಗಂಗೆಗೆ ಅರ್ಪಿಸುವ ಹೊಸ ವಿಧಾನವನ್ನು ವಿವೇಕಾನಂದರು ಕೆಳಗಿನ ಹಾಸ್ಯಪ್ರಸಂಗದ ಮೂಲಕ ವಿವರಿಸುತ್ತಾರೆ.**

ಕಲ್ಕತ್ತೆಯ ಯುವಕನೊಬ್ಬನು ಗಂಗಾನದಿಗೆ ದೂರವಿರುವ ತನ್ನ ಮಾವನ ಮನೆಗೆ ಹೋದ. ಊಟದ ಸಮಯದಲ್ಲಿ ಜನರು ತಾಳ ಮೇಳಗಳೊಂದಿಗೆ ಕಾಯುತ್ತಿದ್ದುದನ್ನು ನೋಡಿದ. ಊಟಕ್ಕೆ ಮುಂಚೆ ಸ್ವಲ್ಪ ಹಾಲನ್ನು ಕುಡಿಯಬೇಕೆಂದು ಅವನ ಅತ್ತೆ ಕೇಳಿ ಕೊಂಡಳು. ಇದು ಇಲ್ಲಿಯ ಲೋಕಾಚಾರವೇನೋ ಎಂದು ಅಳಿಯ ಕುಡಿದ. ಒಂದು ಗುಟುಕು ಹಾಲು ಕುಡಿದೊಡನೆ ವಾಲಗ ಮೊದಲಾಯಿತು.

ಅತ್ತೆ ಆನಂದಾಶ್ರುಗಳನ್ನು ಸುರಿಸುತ್ತಾ ಅಳಿಯನ ತಲೆಯ ಮೇಲೆ ತನ್ನ ಕೈಗಳನ್ನು ಇಟ್ಟು ಅವನನ್ನು ಹರಸುತ್ತ "ಮಗು, ಇವತ್ತು ನೀನು ನಿಜವಾಗಿಯೂ ಮಗನ ಕರ್ತವ್ಯವನ್ನು ನೆರ ವೇರಿಸಿದೆ. ನೀನು ಗಂಗಾನದಿಯ ತೀರದಲ್ಲಿ ವಾಸಿಸುವುದರಿಂದ ನಿನ್ನ ಹೊಟ್ಟೆಯಲ್ಲಿ ಗಂಗಾಜಲ ಇದೆ. ನೀನು ಕುಡಿದ ಹಾಲಿನಲ್ಲಿ ನಿನ್ನ ಸತ್ತ ಮಾವನ ಮೂಳೆಯ ಪುಡಿ ಇತ್ತು. ನೀನು ಅದನ್ನು ಕುಡಿದುದರಿಂದ ಅವನ ಮೂಳೆ ಗಂಗೆಯನ್ನು ಸೇರಿತು ಮತ್ತು ಅವನಿಗೆ ಸದ್ಗತಿ ದೊರಕಿತು" ಎಂದಳು.

**ಸ್ವಾಮಿ ವಿವೇಕಾನಂದರು ಹಾಗೂ ಅವರ ಭಾಷಣಗಳನ್ನು ಶೀಘ್ರಲಿಪಿಯಲ್ಲಿ ಬರೆದುಕೊಳ್ಳುತ್ತಿದ್ದ ಅವರ ಪ್ರಿಯ ಶಿಷ್ಯ ಗುಡ್‌ವಿನ್ ಇಬ್ಬರಲ್ಲೂ ಹಾಸ್ಯಪ್ರವೃತ್ತಿಯು ತೀಕ್ಷ್ಣವಾಗಿತ್ತು.**

ಒಮ್ಮೆ ಸ್ವಾಮೀಜಿಯ ಪಾಶ್ಚಾತ್ಯ ಶಿಷ್ಯ ಇ.ಟಿ. ಸ್ಟರ್ಡಿ (E.T. Sturdy) ತನ್ನ ಶಾಲಾ ಸ್ನೇಹಿತನನ್ನು ಉಪಾಧ್ಯಾಯರು ಹೊಡೆದದ್ದನ್ನು ಖಂಡಿಸುತ್ತಾ, "ನನಗೆ ಚಿಕ್ಕ ಹುಡುಗರನ್ನು ಹೊಡೆಯುವು ದನ್ನು ಕಂಡರೆ ಬಹಳ ಸಿಟ್ಟು ಬರುತ್ತದೆ" ಎಂದರು. ಅದನ್ನು ಕೇಳಿದ ಗುಡ್‌ವಿನ್, "ಹೌದು, ಮಿಸ್ಟರ್ ಸ್ಟರ್ಡಿ, ನನಗೂ ಕೂಡ ಮನುಷ್ಯರು ಕತ್ತೆಯನ್ನು ಹೊಡೆಯುವಾಗ ಹಾಗಾಗುವುದು" ಎಂದರು. ತಕ್ಷಣವೇ ಸ್ವಾಮೀಜಿ, "ಏಕೆಂದರೆ ಅದು ನಿನ್ನಲ್ಲಿನ ಸ್ವಜಾತೀಯ ಭಾವನೆಗಳನ್ನು ಕೆರಳಿಸುತ್ತದೆ" ಎಂದರು! ಎಲ್ಲರೂ ಗೊಳ್ಳೆಂದು ನಕ್ಕುಬಿಟ್ಟರು.

***

ಒಮ್ಮೆ ಸ್ವಾಮಿ ವಿವೇಕಾನಂದರು "ಪ್ರಾಯೋಗಿಕ ಆಧ್ಯಾತ್ಮಿಕತೆಗೆ ಸಲಹೆಗಳು" (Hints on Practical Spirituality) ಎಂಬ ವಿಷಯವನ್ನು ಕುರಿತು ಮಾತನ್ನು ಮುಗಿಸಿದಾಗ ಬ್ರಾನ್ಸ್‌ಬಿ (Bransby) ಎಂಬಾತನು, "ಸ್ವಾಮಿ, ಎಲ್ಲ ವಸ್ತುಗಳೂ ಒಂದೇ ಆದರೆ, ಕೋಸಿಗೂ (cabbage) ಮನುಷ್ಯನಿಗೂ ಏನು ವ್ಯತ್ಯಾಸ?" ಎಂದು ಕೇಳಿದನು. ಸ್ವಾಮೀಜಿಯ ಉತ್ತರವೂ ಪ್ರಶ್ನೆಯಷ್ಟೇ ಮೊನಚಾಗಿತ್ತು. "ಒಂದು ಚಾಕು ತೆಗೆದುಕೊಂಡು ನಿನ್ನ ಕಾಲನ್ನು ಚುಚ್ಚಿ ನೋಡು, ಆಗ ವ್ಯತ್ಯಾಸ ತಿಳಿಯುವುದು" ಎಂದರು !

***

**ಮಾನವರೆಂದು ಕರೆಸಿಕೊಳ್ಳುವವರೆಲ್ಲ ಇನ್ನೂ ನಿಜವಾಗಿ ಮಾನವರಾಗಿಲ್ಲ. ಪ್ರತಿಯೊಬ್ಬರೂ ತಮ್ಮ ಮನಸ್ಸಿನ ಮೂಲಕ ಈ ಪ್ರಪಂಚವನ್ನು ಅಳೆಯಬೇಕಾಗಿದೆ. ಉತ್ತಮ ತಿಳಿವಳಿಕೆ ಪಡೆಯುವುದು ಬಹಳ ಕಷ್ಟ. ಅನೇಕರಿಗೆ ಸೂಕ್ಷ್ಮಕ್ಕಿಂತ ಸ್ಥೂಲವೇ ಹೆಚ್ಚು ಪ್ರಧಾನ. ಇದನ್ನು ಉದಾಹರಿಸುವ ಒಂದು ಕಥೆಯಿದೆ.**

ಬೊಂಬಾಯಿಯಲ್ಲಿ ಇಬ್ಬರು ಇದ್ದರು. ಅವರಲ್ಲಿ ಒಬ್ಬ ಹಿಂದೂ ಮತ್ತೊಬ್ಬ ಜೈನ. ಅವರು ಒಬ್ಬ ಶ್ರೀಮಂತ ವ್ಯಾಪಾರಿಯ ಮನೆಯಲ್ಲಿ ಚದುರಂಗ ಆಡುತ್ತಿದ್ದರು. ಮನೆ ಸಮುದ್ರದ ಪಕ್ಕದಲ್ಲಿ ಇತ್ತು. ಆಟಕ್ಕೆ ಬಹಳ ಹೊತ್ತು ಹಿಡಿಯಿತು. ಅವರು ಬಿಸಿಲು ಮಚ್ಚಿನ ಮೇಲೆ ಇದ್ದಾಗ ಸಮುದ್ರದ ಉಬ್ಬರ ಇಳಿತ ಅವರನ್ನು ಆಕರ್ಷಿಸಿತು. ಒಬ್ಬ ಇದನ್ನು ಒಂದು ಕಥೆಯ ಮೂಲಕ ವಿವರಿಸತೊಡಗಿದ. "ದೇವತೆಗಳು ಆಟಕ್ಕಾಗಿ ಸಮುದ್ರದ ನೀರನ್ನು ದೊಡ್ಡದೊಂದು ಹಳ್ಳಕ್ಕೆ ಹಾಕಿ ಪುನಃ ಅದನ್ನೇ ತೆಗೆಯುತ್ತಿರುವರು"

ಎಂದ. ಮತ್ತೊಬ್ಬ "ಇಲ್ಲ, ದೇವತೆಗಳು ನೀರನ್ನು ಒಂದು ಬೆಟ್ಟದ ಮೇಲಕ್ಕೆ ತಮ್ಮ ಉಪಯೋಗಕ್ಕೆ ಒಯ್ಯುವರು; ಕೆಲಸ ಆದಮೇಲೆ ನೀರನ್ನು ಪುನಃ ಸಮುದ್ರಕ್ಕೆ ಹಾಕುವರು" ಎಂದನು. ಅಲ್ಲಿದ್ದ ಒಬ್ಬ ತರುಣ ವಿದ್ಯಾರ್ಥಿ ಇದನ್ನು ಕೇಳಿ ನಕ್ಕ. "ಆ ಉಬ್ಬರವಿಳಿತಕ್ಕೆ ಕಾರಣ ಚಂದ್ರನ ಆಕರ್ಷಣೆ ಎಂಬುದು ನಿಮಗೆ ಗೊತ್ತಿಲ್ಲವೇ" ಎಂದ. ಇದನ್ನು ಕೇಳಿದ ಇಬ್ಬರೂ ಕೋಪದಿಂದ ಆ ಹುಡುಗನ ಕಡೆಗೆ ತಿರುಗಿ, "ಏನು, ನಮ್ಮನ್ನು ಮೂರ್ಖರೆಂದು ಭಾವಿಸುವೆಯಾ? ಚಂದ್ರನ ಬಳಿ ಅಲೆಗಳನ್ನು ಎಳೆಯುವುದಕ್ಕೆ ಬೇಕಾದಷ್ಟು ಉದ್ದದ ಹಗ್ಗಗಳು ಇವೆ ಎಂದು ನಂಬುವಷ್ಟು ನಾವು ಮೂರ್ಖರೋ?" ಎಂದು ಕೇಳಿದರು. ಇಂತಹ ಅವಿವೇಕದ ವಿವರಣೆಯನ್ನು ಒಪ್ಪಿಕೊಳ್ಳುವುದಕ್ಕೆ ಅವರು ಎಳ್ಳಷ್ಟೂ ಇಷ್ಟಪಡಲಿಲ್ಲ.

ಅಷ್ಟು ಹೊತ್ತಿಗೆ ಮನೆಯ ಯಜಮಾನ ಬಂದ. ಇಬ್ಬರೂ ಅವನನ್ನು ತೀರ್ಪುಕೊಡು ಎಂದರು. ಅವನು ವಿದ್ಯಾವಂತ, ಅವನಿಗೆ ನಿಜಾಂಶ ಗೊತ್ತಿತ್ತು. ಆದರೆ ಚದುರಂಗ ಆಡುವವರಿಗೆ ಇದು ಅರ್ಥವಾಗುವಂತೆ ಇಲ್ಲ ಎಂಬುದನ್ನು ತಿಳಿದು, ವಿದ್ಯಾರ್ಥಿಗೆ ಸುಮ್ಮನಿರುವಂತೆ ಸನ್ನೆಮಾಡಿ, ಇವರಿಗೆ ಉಬ್ಬರವಿಳಿತ ಹೇಗೆ ಆಗುತ್ತದೆ ಎಂಬುದನ್ನು ವಿವರಿಸತೊಡಗಿದನು. ಅದನ್ನು ಕೇಳಿದಾಗ ಚದುರಂಗ ಆಡುತ್ತಿದ್ದವರಿಗೆ ತುಂಬ ತೃಪ್ತಿಯಾಯಿತು. ಅವನ ವಿವರಣೆ ಹೀಗಿತ್ತು: "ದೂರದಲ್ಲಿ ಸಮುದ್ರದ ಒಳಗೆ ದೊಡ್ಡದೊಂದು ಸ್ಪಂಜಿನ ಬೆಟ್ಟವಿದೆ. ನೀವಿಬ್ಬರೂ ಸ್ಪಂಜನ್ನು ನೋಡಿರಬಹುದು. ನಾನು ಹೇಳುವುದು ನಿಮಗೆ ಗೊತ್ತಿದೆ ತಾನೆ? ಈ ಸ್ಪಂಜಿನ ಬೆಟ್ಟ, ಬೇಕಾದಷ್ಟು ನೀರನ್ನು ಹೀರಿಕೊಂಡಾಗ ಸಮುದ್ರ ಇಳಿಯುವುದು. ಆಮೇಲೆ ದೇವತೆಗಳು ಬಂದು ಆ ಬೆಟ್ಟದ ಮೇಲೆ ಕುಣಿದಾಗ, ಅವರ ಭಾರದಿಂದ ಬೆಟ್ಟ ಕೆಳಗೆ ಕುಗ್ಗಿ ಹೀರಿಕೊಂಡ ನೀರೆಲ್ಲ ಹೊರಗೆ ಬಂದಾಗ ಸಮುದ್ರ ಉಬ್ಬುವುದು. ಉಬ್ಬರವಿಳಿತಕ್ಕೆ ಇದೇ ಕಾರಣ, ಗೊತ್ತಾಯಿತೆ? ಇದು ಎಷ್ಟು ವಿಚಾರಯುಕ್ತವಾಗಿದೆ ಮತ್ತು ಸುಲಭವಾಗಿದೆ! ಇದು ನಿಮಗೆ ಚೆನ್ನಾಗಿ ಅರ್ಥವಾಗುವುದು."

–ಸ್ವಾಮಿ ವಿವೇಕಾನಂದ

***

ಸ್ವಾಮಿ ವಿವೇಕಾನಂದರು ಎರಡನೆ ಬಾರಿ ವಿದೇಶಕ್ಕೆ ಹೋಗುವಾಗ ಒಂದು ಜಾಡಿಯಲ್ಲಿ ಗಂಗಾಜಲವನ್ನು ತೆಗೆದುಕೊಂಡು ಹೋಗಿದ್ದರು. ಅವರು ಪಯಣಿಸುತ್ತಿದ್ದ ಹಡಗು ಮದ್ರಾಸಿನ ಹತ್ತಿರ ಹೋಗುತ್ತಿರುವಾಗ ಆ ಜಾಡಿ ಸೋರತೊಡಗುತ್ತದೆ. ಈ ಪ್ರಸಂಗವನ್ನು ಕುರಿತ ಸ್ವಾಮೀಜಿಯವರ ಹಾಸ್ಯಮಯ ವರ್ಣನೆ :

ರಾತ್ರಿ ತುಂಬಾ ಹೊತ್ತಾದ ಮೇಲೆ ಎದ್ದು ನೋಡಿದಾಗ ಗಂಗಾತಾಯಿ ಆ ಜಾಡಿಯಲ್ಲಿರುವ ಇಚ್ಛೆಯಿಲ್ಲದೆ ಹೊರಗೆ ಬರುವುದಕ್ಕೆ ಪ್ರಯತ್ನಿಸುತ್ತಿದ್ದುದನ್ನು ನೋಡಿದೆನು. ನಾನು ಆಲೋಚಿಸಿದೆ, ಆ ಮಹಾತಾಯಿ ಹಿಂದೆ ಮಾಡಿದಂತೆ ಹಿಮಾಚಲವನ್ನು ಭೇದಿಸುವುದು, ಐರಾವತವನ್ನು ಕೊಚ್ಚಿಕೊಂಡು ಹೋಗುವುದು, ಜಹ್ನುಮುನಿಯ ಕುಟೀರವನ್ನು ಕೊಚ್ಚಿಕೊಂಡು ಹೋಗುವುದು ಇವುಗಳನ್ನು ಅಭಿನಯಿಸುವುದಕ್ಕೆ ಹೊರಟರೆ ಎಂತಹ ವಿಪತ್ತು ಸಂಭವಿಸುವುದು! ಆಕೆಗೆ ನಮಸ್ಕರಿಸಿ ಹಲವು ಸ್ತುತಿಸ್ತವಗಳನ್ನು ಅರ್ಪಿಸಿ ಬೇಡಿಕೊಂಡೆ : "ತಾಯಿ! ಸ್ವಲ್ಪ ತಾಳು. ನಾಳೆ ಮದ್ರಾಸನ್ನು ಸೇರಿದ ಮೇಲೆ ನಿನ್ನ ಇಚ್ಛೆಯಂತೆ ಮಾಡು. ಅಲ್ಲಿ ಐರಾವತಕ್ಕಿಂತ ಬಲವಾದ ತಲೆಚಿಪ್ಪಿನವರು ಇರುವರು. ಅನೇಕರಿಗೆ ಜಹ್ನುಋಷಿಗೆ ಇದ್ದಂಥ ಗುಡಿಸಲುಗಳಿವೆ. ಅರ್ಧಗಂಟು ಅರ್ಧಮುಂಡನದಿಂದ ಕಂಗೊಳಿಸುತ್ತಿರುವ ಜನರ ತಲೆಯೋ ಕಲ್ಲಿನಂತಿದೆ. ಹಿಮಾಲಯ ಬೆಣ್ಣೆಯಂತಿದೆ, ಅವರ ತಲೆಯೊಂದಿಗೆ ಹೋಲಿಸಿ ನೋಡಿದರೆ ! ನೀನು ಆಗ ಎಷ್ಟು ಬೇಕಾದರೂ ಅವರ ತಲೆಯನ್ನು ಒಡೆಯಬಹುದು. ಈಗ ದಯವಿಟ್ಟು ತಾಳು ತಾಯಿ."

ಆದರೆ ನನ್ನ ಪ್ರಾರ್ಥನೆಯೆಲ್ಲ ವಿಫಲವಾಯಿತು. ತಾಯಿ ನನ್ನ ಬೇಡಿಕೆಯನ್ನು ಆಲಿಸಲಿಲ್ಲ. ಆಗ ಒಂದು ಉಪಾಯ ಹೊಳೆಯಿತು. ಹೇಳಿದೆ : "ನೋಡು ತಾಯಿ, ಪೇಟ ಕಟ್ಟಿ, ಕೋಟು ಹಾಕಿಕೊಂಡು ಹಡಗಿನಲ್ಲಿ ಅಲೆಯುತ್ತಿರುವವರನ್ನು ನೋಡು! ಅವರೆಲ್ಲ ಪಕ್ಕ ಮಹಮ್ಮದೀಯರು, ಗೋಮಾಂಸ ಭಕ್ಷಕರು. ಇಲ್ಲಿ ಕೋಣೆ ಗುಡಿಸುವವರನ್ನು ನೋಡಿದೆಯಲ್ಲ, ಅವರೆಲ್ಲ ಜಾಡಮಾಲಿಗಳು, ಲಾಲ್ ಬೇಗನ ಶಿಷ್ಯರು. ನೀನು ಪ್ರಾರ್ಥನೆಯನ್ನು ಕೇಳದೆ ಹೋದರೆ ಅವರನ್ನು ಕರೆದು ನಿನ್ನನ್ನು ಮುಟ್ಟುವಂತೆ ಹೇಳುವೆನು. ನಿನ್ನನ್ನು ಸುಮ್ಮನಿರಿಸಲು ಇದೂ ಸಾಧ್ಯವಿಲ್ಲದೆ ಇದ್ದರೆ, ನಿನ್ನನ್ನು ತಂದೆಯ ಮನೆಗೆ ಕಳುಹಿಸುತ್ತೇನೆ. ಎದುರಿಗಿರುವ ಕೋಣೆಯನ್ನು ನೋಡಿದೆಯಾ; ಅಲ್ಲಿ ನಿನ್ನನ್ನು ಕೂಡಿಹಾಕಿದರೆ ಹಿಮಾಲಯದಲ್ಲಿ ನೀನು ಹಿಂದೆ ಇದ್ದ ಸ್ಥಿತಿಗೆ ಹೋಗುವೆ. ಆಗ ನಿನ್ನ ಚೇಷ್ಟೆಯೆಲ್ಲ ನಿಂತು ತೆಪ್ಪಗಾಗುವೆ. ನೀನೊಂದು ಹಿಮದ ಕಲ್ಲಾಗುವೆ." ಇದನ್ನು ಕೇಳಿ ತಾಯಿ ತೆಪ್ಪಗಾದಳು. ಪ್ರಪಂಚವೆಲ್ಲ ಹೀಗೆ. ದೇವತೆಗಳು ಮಾತ್ರವಲ್ಲ ಜನ ಕೂಡ ಹಾಗೆ. ಯಾವಾಗಲಾದರೂ ಒಬ್ಬ ಭಕ್ತ ಸಿಕ್ಕಿದರೆ ತಲೆಮೇಲೆ ಸವಾರಿ ಮಾಡುವುದಕ್ಕೆ ಯತ್ನಿಸುವರು.

***

### ಆಶ್ರಮದ ವಿಶೇಷ ಕಾರ್ಯಕ್ರಮಗಳು

ಜುಲೈ 2002

| | | |
|---|---|---|
| 6 | ಶನಿವಾರ | ಏಕಾದಶಿ |
| 20 | ಶನಿವಾರ | ಏಕಾದಶಿ |
| 24 | ಬುಧವಾರ | ಶ್ರೀಗುರುಪೂರ್ಣಿಮಾ |

ಪ್ರತಿ ಗುರುವಾರ ಮತ್ತು ಭಾನುವಾರ ಕನ್ನಡದಲ್ಲಿಯೂ ಪ್ರತಿ ಶನಿವಾರ ಇಂಗ್ಲಿಷಿನಲ್ಲಿಯೂ ಸಂಜೆ 6 ರಿಂದ 7 ರವರೆಗೆ ಆಧ್ಯಾತ್ಮಿಕ ಪ್ರವಚನಗಳು ಇರುತ್ತವೆ.

ವಿವರಗಳಿಗಾಗಿ ಆಶ್ರಮವನ್ನು ಸಂಪರ್ಕಿಸಿ